ಮಂಡ್ಯ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗವನ್ನು ತೆರೆಯುವುದು

292(728) - ಶ್ರೀ ಆತ್ಮಾನಂದ ಎಂ.ಎಸ್(ಮಂಡ್ಯ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗದ ಅವಶ್ಯಕತೆಯಿದ್ದು ಈ ಬಗೆಗೆ ಜನ ಪ್ರತಿನಿಧಿಗಳ ಹಾಗೂ ಸಾರ್ವಜನಿಕರ ಅಗ್ರಹ ಪೂರ್ವಕವಾದ ಮನವಿಯನ್ನು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ, ಈ ಬಗೆಗೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಬಿ. ರಮಾನಾಥ್ ರೈ (ಸಾರಿಗೆ ಸಚಿವರು):

ಅ) ಹೌದು.

ಆ) ಮಂಡ್ಯದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವಿಭಾಗೀಯ ಕಛೇರಿಯನ್ನು ಆದಷ್ಟು ಶೀಘ್ರದಲ್ಲಿಯೆ ಸ್ಥಾಪಿಸಲಾಗುತ್ತದೆ.

ಸೇಡಂ ತಾಲ್ಲೂಕಿನ ಸೆರಟ್ಲಾಪಂಡ ಕೆರೆಯ ಏರಿ ಬಿರುಕು ಬಿಟ್ಟಿರುವುದು

293(318) - ಶ್ರೀ ಬಸವಂತರೆಡ್ಡಿ ಮಾತಕಪಲ್ಲಿ (ಸೇಡಂ): ಮಾನ್ಯ ಗೃಹ ಮತ್ತು ಸಣಅಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ತೆಲಂಗಾಣ ಆಂಧ್ರ ಗಡೀಯಂಚಿನಲ್ಲಿರುವ ಸೇಡಂ ತಾಲ್ಲೂಕಿನ ಸೆರಟ್ಲಾಪಾಡ ಕೆರೆ ಪ್ರಾರಂಭವಾಗಿ 6-7 ವರ್ಷಗಳಾದರೂ ಸಹ ಪೂರ್ತಿಯಾಗದೇ ಇರುವ ಈ ಕೆರೆಯ ಏರಿ ಬಿರುಕು ಬಿಟ್ಟಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಕೆರೆ ದಿನಾಂಕ:31-3-2001 ರೊಳಗಾಗಿ ಮುಗಿಸಬೇಕಾಗಿದ್ದರೂ ಇಲ್ಲಿಯವರೆಗೆ ಪೂರ್ತಿಗೊಳಿಸಿಲ್ಲದಿರಲು ಕಾರಣವೇನು;

ಇ) ಸುಮಾರು ಒಂದು ಕೋಟಿ ಎಪ್ಪತ್ತು ಲಕ್ಷ ರೂ.ಗಳು ಖರ್ಚು ಮಾಡಿರುವ ಈ ಕೆರೆಯಿಂದ ರೈತರಿಗೆ ಪೂರ್ಣ ಪ್ರಮಾಣದಲ್ಲಿ ಪ್ರಯೋಜನವಾಗಲಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಇಂತಹ ಕಳಪೆ ಕಾಮಗಾರಿ ಮಾಡಿರುವ ಗುತ್ತಿಗೆದಾರರ ಮೇಲೆ ಕೈಗೊಂಡಿರುವ ಕ್ರಮವೇನು; ಇದರ ದುರಸ್ತಿ ಮತ್ತು ನಿರ್ಮಾಣ ಪೂರ್ತಿಗೊಳಿಸಿ ರೈತರಿಗೆ ಅನುಕೂಲ ಮಾಡುವುದು ಯಾವಾಗ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿಸಚಿವರು):

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಸೆರಟ್ಲಾಪಾಡ (ನರತಾಲಪಾಡ) ಸಣ್ಣ ನೀರಾವರಿ ಕೆರೆಯು ಏಪ್ರಿಲ್ 1998ರಲ್ಲಿ ಪ್ರಾರಂಭಗೊಳಿಸಿ ಡಿಸೆಂಬರ್ 01 ರ ಅಂತ್ಯದಲ್ಲಿ ಪೂರ್ಣಗೊಳಿಸಲಾಗಿದೆ. ಈ ಕೆರೆಯ ಏರಿಯ ಮೇಲೆ ಇಲ್ಲಿಯವರೆಗೂ ಯಾವುದೇ ರೀತಿಯ ಬಿರುಕು ಬಿಟ್ಟಿರುವುದಿಲ್ಲ.

ಅ) ಈ ಕೆರೆಯು ದಿನಾಂಕ: 31-3-2001 ರ ಒಳಗಾಗಿ ಪೂರ್ಣಗೊಳಿಸಲು ನಿಯೋಜಿಸಲಾಗಿತ್ತು. ಆದರೆ ಅವಶ್ಯಕ ಹಣ ಬಿಡುಗಡೆಯಾಗದಿರುವ ಪ್ರಯುಕ್ತ ವಿಳಂಬವಾಗಿರುತ್ತದೆ.

ಇ) ಬಂದಿದೆ.

ಈ) ಈ ಕೆರೆಯ ನಿರ್ಮಾಣದಲ್ಲಿ ಕಳಪೆ ಕಾಮಗಾರಿ ಆಗಿರುವುದಿಲ್ಲವಾದರಿಂದ ಗುತ್ತಿಗೆದಾರರ ಮೇಲೆ ಕ್ರಮ ತೆಗೆದುಕೊಳ್ಳುವ ಪ್ರಮೇಯೇ ಬರುವುದಿಲ್ಲ. ಹಾಗೂ ದುರಸ್ತಿ ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಸದ್ಯ ಕಾಮಗಾರಿಯು ಪೂರ್ಣಗೊಂಡಿರುವುದರಿಂದ ಕೆರೆಯಲ್ಲಿನ ನೀರಿನ ಸಂಗ್ರಹಣೆ ಅನುಗುಣವಾಗಿ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು.

ಸೇಡಂ ತಾಲ್ಲೂಕಿನ ಇಟಕಾಲ್ ಹೊಸ ಕೆರೆಯ ಕಾಲುವೆಗಳ ನಿರ್ಮಾಣ

294(323) - ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ): ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಬೂರಗಪಲ್ಲಿ ಸಮೀಪ ಇಟಕಾಲ್ ಹೊಸ ಕೆರೆಯಿಂದ 413 ಏಕರೆ ನೀರಾವರಿಯಾಗುತ್ತದೆ ಎಂದು ತಿಳಿಸಿರುವ ಸರ್ವೆ ನಂಬರುಗಳು ಯಾವುವು; ಎಕರೆವಾರು ನೀಡುವುದು;

ಆ) ಈ ಕೆರೆ ನಿರ್ಮಾಣ ಪ್ರಾರಂಭವಾಗಿ ಸುಮಾರು 8-10 ವರ್ಷಗಳಾದರೂ ಕಾಲುವೆಗಳು ಇಲ್ಲಿಯವರೆಗೆ ಪೂರ್ತಿಯಾಗಿಲ್ಲ, ಆದರೆ ಈ ನಿಗಧಿ ಪಡಿಸಿರುವ ಭೂ ಪ್ರದೇಶಗಳಿಗೆ ಕೆರೆ ಕಾಲುವೆಗಳನ್ನು ಪೂರ್ತಿ ಮಾಡಿ ನೀರು ಸರಬರಾಜು ಯಾವಾಗ ಮಾಡಲಾಗುವುದು.

ಇ) 8-10 ವರ್ಷಗಳಿಂದ ಇಲ್ಲಿಯವರೆಗೆ ಕಾಲುವೆ ನಿರ್ಮಾಣ ಮಾಡದೇ ಇರುವ ಗುತ್ತಿಗೆದಾರರ ಮೇಲೆ ಕೈಗೊಂಡಿರುವ ಕ್ರಮವೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು):

ಅ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಕಾಲುವೆಗಳು ಪೂರ್ಣಗೊಂಡಿದ್ದು, ನಿಗದಿತ ಅಚ್ಚುಕಟ್ಟು 483.27 ಎಕರೆಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

ಇ) ಉದ್ಭವಿಸುವುದಿಲ್ಲ.

ಸೇಡಂ ತಾಲ್ಲೂಕಿನ ಸಣ್ಣ ನೀರಾವರಿ ಉಪವಿಭಾಗದ ಕಾರ್ಯಾಲಯವನ್ನು ಪುನಃ ಪ್ರಾರಂಭಿಸುವುದು.

295(326) - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ): ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಉಪ ವಿಭಾಗ ಸ್ಥಳಾಂತರಿಸಿರುವುದನ್ನು ಪುನಃ ಪ್ರಾರಂಭ ಮಾಡಲು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ತಿಳಿಸಿ ಎಲ್ಲಿಯರೆಗೆ ಕ್ರಮ ಜರುಗಿಸದೇ ಇರಲು ಕಾರಣವೇನು;